ಸುಮಶ್ರೀಸಂಸ್ಕಾರಮಾಲಿಕೆ - **001**

# ಬಾಲಸಂಸ್ಕಾರತರಂಗಿಣೀ

ಸುಮಶ್ರೀ ಸಂಸ್ಕೃತ ಗುರು

ಪುಸ್ತಕದ ಹೆಸರು – ಬಾಲಸಂಸ್ಕಾರತರಂಗಿಣೀ

ಎಲ್ಲಾ ಹಕ್ಕುಗಳನ್ನು “ಸುಮಶ್ರೀ ಸಂಸ್ಕೃತ ಗುರು” ಸಂಸ್ಥೆಯು ಹೊಂದಿರುತ್ತದೆ.

ಪ್ರಕಾಶಕರು – ಸುಮಶ್ರೀ ಸಂಸ್ಕೃತ ಗುರು

ಮುದ್ರಣೆ – ೨೪/೦೫/೨೦೨೧

ಪುಟಗಳು – ೧೨

ಮೌಲ್ಯ – ೫೦/-

ಪ್ರಕಾಶನೆ ಮತ್ತು ವಿತರಣೆ - ಸುಮಶ್ರೀ ಸಂಸ್ಕೃತ ಗುರು

ಸಂಪರ್ಕಸೂಚಿ -

www.sumashri.com

sumashri.sms@gmail.com

+919008543122

Sumashri SMS

sumashri.com

ಓಂ

## ಪ್ರಾರ್ಥನಾ ಶ್ಲೋಕಗಳು

ಗಣಪತಿಪ್ರಾರ್ಥನಾ

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ|

ಯನ್ನತ್ವಾ ಕೃತಕೃತ್ಯಾಃ ಸ್ಯುಃ ತಂ ನಮಾಮಿ ಗಜಾನನಮ್||

ಗುರುವಂದನಾ

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ|

ಗುರುಃ ಸಾಕ್ಷಾತ್ ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ||

ಸರಸ್ವತೀನಮಸ್ಕಾರಃ

ಸರಸ್ವತಿ ನಮಸ್ತುಭ್ಯಂ ವರದೇ ಕಾಮರೂಪಿಣಿ|

ವಿದ್ಯಾರಂಭಂ ಕರಿಷ್ಯಾಮಿ ಸಿದ್ಧಿರ್ಭವತು ಮೇ ಸದಾ||

ದಕ್ಷಿಣಾಮೂರ್ತಿಪ್ರಾರ್ಥನಾ

ಗುರವೇ ಸರ್ವಲೋಕಾನಾಂ ಭಿಷಜೇ ಭವರೋಗಿಣಾಮ್|

ನಿಧಯೇ ಸರ್ವವಿದ್ಯಾನಾಂ ದಕ್ಷಿಣಾಮೂರ್ತಯೇ ನಮಃ||

sumashri.com

# ಸಂವತ್ಸರ ಪರಿಚಯ

ಪ್ರಭವೋ ವಿಭವಃ ಶುಕ್ಲಃ ಪ್ರಮೋದಶ್ಚ ಪ್ರಜಾಪತಿಃ|

ಅಂಗಿರಾಃ ಶ್ರೀಮುಖೋ ಭಾವೋ ಯುವಾ ಧಾತಾ ತಥೈವ ಚ||೧||

ಈಶ್ವರೋ ಬಹುಧಾನ್ಯಶ್ಚ ಪ್ರಮಾಥೀ ವಿಕ್ರಮೋ ವೃಷಃ|

ಚಿತ್ರಭಾನುಃ ಸ್ವಭಾನುಶ್ಚ ತಾರಣಃ ಪಾರ್ಥಿವೋ ವ್ಯಯಃ||೨||

ಸರ್ವಜಿತ್ ಸರ್ವಧಾರೀ ಚ ವಿರೋಧೀ ವಿಕೃತಿಃ ಖರಃ|

ನಂದನೋ ವಿಜಯಶ್ಚೈವ ಜಯೋ ಮನ್ಮಥದುರ್ಮುಖೌ||೩||

ಹೇವಿಲಂಬೀ ವಿಲಂಬೀ ಚ ವಿಕಾರೀ ಶಾರ್ವರೀ ಪ್ಲವಃ|

ಶುಭಕೃತ್ ಶೋಭಕೃತ್ ಕ್ರೋಧೀ ವಿಶ್ವಾವಸುಪರಾಭವೌ||೪||

ಪ್ಲವಂಗಃ ಕೀಲಕಸ್ಸೌಮ್ಯಃ ಸಾಧಾರಣವಿರೋಧಿಕೃತ್|

ಪರಿಧಾವೀ ಪ್ರಮಾದೀ ಚ ಆನಂದೋ ರಾಕ್ಷಸೋ ನಲಃ||೫||

ಪಿಂಗಲಃ ಕಾಲಯುಕ್ತಶ್ಚ ಸಿದ್ಧಾರ್ಥೀ ರೌದ್ರದುರ್ಮತೀ|

ದುಂದುಭೀ ರುಧಿರೋದ್ಗಾರೀ ರಕ್ತಾಕ್ಷೀ ಕ್ರೋಧನಃ ಕ್ಷಯಃ||೬||

sumashri.com

1. ಪ್ರಭವಃ
2. ವಿಭವಃ
3. ಶುಕ್ಲಃ
4. ಪ್ರಮೋದಃ
5. ಪ್ರಜಾಪತಿಃ
6. ಅಂಗಿರಸ್
7. ಶ್ರೀಮುಖಃ
8. ಭಾವಃ
9. ಯುವಾ
10. ಧಾತಾ
11. ಈಶ್ವರಃ
12. ಬಹುಧಾನ್ಯಃ
13. ಪ್ರಮಾಥೀ
14. ವಿಕ್ರಮಃ
15. ವೃಷಃ
16. ಚಿತ್ರಭಾನುಃ
17. ಸ್ವಭಾನುಃ
18. ತಾರಣಃ
19. ಪಾರ್ಥಿವಃ
20. ವ್ಯಯಃ
21. ಸರ್ವಜಿತ್
22. ಸರ್ವಧಾರೀ
23. ವಿರೋಧೀ
24. ವಿಕೃತಿಃ
25. ಖರಃ
26. ನಂದನಃ
27. ವಿಜಯಃ
28. ಜಯಃ
29. ಮನ್ಮಥಃ
30. ದುರ್ಮುಖಃ
31. ಹೇವಿಲಂಬೀ
32. ವಿಲಂಬೀ

33. ವಿಕಾರೀ
34. ಶಾರ್ವರೀ
35. ಪ್ಲವಃ
36. ಶುಭಕೃತ್
37. ಶೋಭಕೃತ್
38. ಕ್ರೋಧೀ
39. ವಿಶ್ವಾವಸುಃ
40. ಪರಾಭವಃ
41. ಪ್ಲವಂಗಃ
42. ಕೀಲಕಃ
43. ಸೌಮ್ಯಃ
44. ಸಾಧಾರಣಃ
45. ವಿರೋಧಿಕೃತ್
46. ಪರಿಧಾವೀ
47. ಪ್ರಮಾದೀ
48. ಆನಂದಃ
49. ರಾಕ್ಷಸಃ
50. ನಲಃ
51. ಪಿಂಗಲಃ
52. ಕಾಲಯುಕ್ತಃ
53. ಸಿದ್ಧಾರ್ಥೀ
54. ರೌದ್ರಃ
55. ದುರ್ಮತಿಃ
56. ದುಂದುಭಿಃ
57. ರುಧಿರೋದ್ಗಾರೀ
58. ರಕ್ತಾಕ್ಷೀ
59. ಕ್ರೋಧನಃ
60. ಕ್ಷಯಃ

ಎಂಬುದಾಗಿ ಅರವತ್ತು ಸಂವತ್ಸರಗಳನ್ನು ತಿಳಿಯುವುದು.

sumashri.com

## ಅಯನ ಪರಿಚಯ

ಭಾನೋರ್ಮಕರಸಂಕ್ರಾಂತೇಃ ಷಣ್ಮಾಸಾ ಉತ್ತರಾಯಣಮ್|

ಕರ್ಕಾದೇಸ್ತು ತಥೈವ ಸ್ಯಾತ್ ಷಣ್ಮಾಸಾ ದಕ್ಷಿಣಾಯನಮ್ ||

1. ಉತ್ತರಾಯಣಮ್
2. ದಕ್ಷಿಣಾಯನಮ್

ಸೂರ್ಯನು ಮಕರರಾಶಿಯಿಂದ ಮಿಥುನರಾಶಿಯವರೆಗೆ ಸಂಚರಿಸುವ ಕಾಲಕ್ಕೆ ಉತ್ತರಾಯಣವೆಂದೂ, ಕರ್ಕರಾಶಿಯಿಂದ ಧನೂರಾಶಿಯವರೆಗೆ ಸಂಚರಿಸುವ ಕಾಲಕ್ಕೆ ದಕ್ಷಿಣಾಯನವೆಂದೂ ಕರೆಯಲಾಗುತ್ತದೆ. ಈ ಪ್ರಕಾರ ಒಂದು ಸಂವತ್ಸರಕ್ಕೆ ಎರಡು ಅಯನಗಳನ್ನು ತಿಳಿಯುವುದು.

# ಋತು ಪರಿಚಯ

ವಸಂತಗ್ರೀಷ್ಮಕೌ ಚೈವ ವರ್ಷರ್ತುಶರದೌ ತಥಾ|

ಹೇಮಂತಶಿಶಿರೌ ಚೈವ ಷಡೇತೇ ಋತವಃ ಸ್ಮೃತಾಃ ||

ಒಂದು ಸಂವತ್ಸರಕ್ಕೆ ಆರು ಋತುಗಳು. ವಸಂತ-ಋತು, ಗ್ರೀಷ್ಮ-ಋತು, ವರ್ಷ-ಋತು, ಶರದೃತು, ಹೇಮಂತ-ಋತು, ಶಿಶಿರ-ಋತು. ಈ ಋತುಗಳನ್ನು ಎರಡೆರಡು ತಿಂಗಳುಗಳಿಗೆ ಒಂದೊಂದರಂತೆ ಹನ್ನೆರಡು ತಿಂಗಳುಗಳಿಗೆ ಆರು ಋತುಗಳನ್ನು ತಿಳಿಯುವುದು.

# ಮಾಸ ಪರಿಚಯ

ಚೈತ್ರವೈಶಾಖಜ್ಯೇಷ್ಠಾಖ್ಯಾಃ ಆಷಾಢಃ ಶ್ರಾವಣಸ್ತಥಾ|

ಭಾದ್ರಶ್ಚಾಶ್ವಯುಜಶ್ಚೈವ ಕಾರ್ತಿಕೋ ಮಾರ್ಗಶೀರ್ಷಕಃ||

ಪುಷ್ಯಮಾಸೋ ಮಾಘಮಾಸಸ್ತಥಾ ಫಾಲ್ಗುನನಾಮಕಃ|

ಏತೇ ದ್ವಾದಶಮಾಸಾಃ ಸ್ಯುಃ ಚಾಂದ್ರಮಾನೇ ಪ್ರಕೀರ್ತಿತಾಃ||

1. ಚೈತ್ರಃ
2. ವೈಶಾಖಃ
3. ಜ್ಯೇಷ್ಠಃ
4. ಆಷಾಢಃ
5. ಶ್ರಾವಣಃ
6. ಭಾದ್ರಪದಃ
7. ಆಶ್ವಯುಜಃ
8. ಕಾರ್ತಿಕಃ
9. ಮಾರ್ಗಶೀರ್ಷಃ
10. ಪುಷ್ಯಃ
11. ಮಾಘಃ
12. ಫಾಲ್ಗುನಃ

sumashri.com

## ಪಕ್ಷ ಪರಿಚಯ

ದ್ವಾವೇವ ಲೋಕೇ ವಿಖ್ಯಾತೌ ಶುಕ್ಲಕೃಷ್ಣೇತಿ ಪಕ್ಷಕೌ|

ಪ್ರತಿಪತ್-ಪೌರ್ಣಮಾಸ್ಯಂತಂ ಶುಕ್ಲಪಕ್ಷ ಇತಿ ಸ್ಮೃತಃ||

ಪ್ರತಿಪತ್-ದರ್ಶಮಾಸ್ಯಂತಂ ಕೃಷ್ಣಪಕ್ಷ ಇತಿ ಸ್ಮೃತಃ|

ಪ್ರತಿಪತ್ ತಿಥಿಯಿಂದ ಪೂರ್ಣಿಮೆಯವರೆಗೆ ಹದಿನೈದು ದಿನಗಳ ಕಾಲವನ್ನು ಶುಕ್ಲಪಕ್ಷವೆಂದು ಮತ್ತು ಪೂರ್ಣಿಮೆಯ ನಂತರದ ಪ್ರತಿಪತ್ತಿನಿಂದ ಅಮಾವಾಸ್ಯೆಯವರೆಗಿನ ಹದಿನೈದು ದಿನಗಳ ಕಾಲವನ್ನು ಕೃಷ್ಣಪಕ್ಷವೆಂದು ತಿಳಿಯಬೇಕು.

## ತಿಥಿ ಪರಿಚಯ

ಪ್ರತಿಪಚ್ಚ ದ್ವಿತೀಯಾ ಚ ತೃತೀಯಾ ಚ ಚತುರ್ಥಿಕಾ|

ಪಂಚಮೀ ಚ ತಥಾ ಷಷ್ಠೀ ಸಪ್ತಮೀ ಚಾಷ್ಟಮೀ ತಥಾ||

ನವಮೀ ದಶಮೀ ಚೈಕಾದಶೀ ಚ ದ್ವಾದಶೀ ತಥಾ|

ತ್ರಯೋದಶೀಚತುರ್ದಶ್ಯೌ ಪೂರ್ಣಿಮಾ ದರ್ಶನಾಮಿಕಾ||

sumashri.com

1. ಪ್ರತಿಪತ್ (ಪಾಡ್ಯ)
2. ದ್ವಿತೀಯಾ (ಬಿದಿಗೆ)
3. ತೃತೀಯಾ (ತದಿಗೆ)
4. ಚತುರ್ಥೀ (ಚೌತಿ)
5. ಪಂಚಮೀ
6. ಷಷ್ಠೀ
7. ಸಪ್ತಮೀ
8. ಅಷ್ಟಮೀ
9. ನವಮೀ
10. ದಶಮೀ
11. ಏಕಾದಶೀ
12. ದ್ವಾದಶೀ
13. ತ್ರಯೋದಶೀ
14. ಚತುರ್ದಶೀ
15. ಪೂರ್ಣಿಮಾ (ಹುಣ್ಣಿಮೆ) ಅಥವಾ ಅಮಾವಾಸ್ಯಾ.

# <u>ನಕ್ಷತ್ರ ಪರಿಚಯ</u>

ಅಶ್ವಿನೀ ಭರಣೀ ಚೈವ ಕೃತ್ತಿಕಾ ರೋಹಿಣೀ ಮೃಗಃ|

ಆರ್ದ್ರಾಪುನರ್ವಸೂ ಪುಷ್ಯಸ್ತಥಾಽಽಶ್ಲೇಷಾ ಮಘಾ ತಥಾ||

ಪೂರ್ವಾಫಲ್ಗುನಿಕಾ ತಸ್ಮಾದುತ್ತರಾಫಲ್ಗುನೀ ತಥಾ|

ಹಸ್ತಶ್ಚಿತ್ರಾ ತಥಾ ಸ್ವಾತೀ ವಿಶಾಖಾ ತದನಂತರಮ್||

ಅನುರಾಧಾ ತತೋ ಜ್ಯೇಷ್ಠಾ ತಥಾ ಮೂಲಂ ನಿಗದ್ಯತೇ|

ಪೂರ್ವಾಷಾಢೋತ್ತರಾಷಾಢೇ ಅಭಿಜಿಚ್ಛ್ರವಣಂ ತಥಾ||

ಧನಿಷ್ಠಾ ಶತತಾರಾಖ್ಯಾ ಪೂರ್ವಾಭಾದ್ರಪದಾ ತಥಾ|

ಉತ್ತರಾಭಾದ್ರಪದಾ ಚ ಸ್ಯೂ ರೇವತ್ಯೇತಾನಿ ಭಾನಿ ಚ||

sumashri.com

1. ಅಶ್ವಿನೀ
2. ಭರಣೀ
3. ಕೃತ್ತಿಕಾ
4. ರೋಹಿಣೀ
5. ಮೃಗಶಿರಃ
6. ಆರ್ದ್ರಾ
7. ಪುನರ್ವಸುಃ
8. ಪುಷ್ಯಃ
9. ಆಶ್ಲೇಷಾ
10. ಮಘಾ
11. ಪೂರ್ವಫಲ್ಗುನೀ(ಹುಬ್ಬಾ)
12. ಉತ್ತರಫಲ್ಗುನೀ(ಉತ್ತರಾ)
13. ಹಸ್ತಾ
14. ಚಿತ್ರಾ(ಚಿತ್ತಾ)
15. ಸ್ವಾತೀ
16. ವಿಶಾಖಾ
17. ಅನೂರಾಧಾ
18. ಜ್ಯೇಷ್ಠಾ
19. ಮೂಲಾ
20. ಪೂರ್ವಾಷಾಢಾ
21. ಉತ್ತರಾಷಾಢಾ
22. ಶ್ರವಣಃ
23. ಧನಿಷ್ಠಾ
24. ಶತಭಿಷಾ
25. ಪೂರ್ವಾಭಾದ್ರಾ
26. ಉತ್ತರಾಭಾದ್ರಾ
27. ರೇವತೀ

(ಅಭಿಜಿತ್ ಎನ್ನುವ ಹೆಸರಿನ ನಕ್ಷತ್ರವನ್ನೂ ಸಹ ಜ್ಯೋತಿಶ್ಶಾಸ್ತ್ರದಲ್ಲಿ ಹೇಳಲಾಗಿದೆ.)

# ರಾಶಿ ಪರಿಚಯ

ಮೇಷೋ ವೃಷಶ್ಚ ಮಿಥುನಂ ಕರ್ಕಃ ಸಿಂಹಶ್ಚ ಕನ್ಯಕಾ|

ತುಲಾ ಚ ವೃಶ್ಚಿಕಶ್ಚೈವ ಧನುಶ್ಚ ಮಕರಸ್ತಥಾ|

ಕುಂಭಶ್ಚೈವ ತಥಾ ಮೀನಶ್ಚೈತೇ ದ್ವಾದಶರಾಶಯಃ||

1. ಮೇಷಃ
2. ವೃಷಭಃ
3. ಮಿಥುನಃ
4. ಕರ್ಕಾಟಕಃ
5. ಸಿಂಹಃ
6. ಕನ್ಯಾ
7. ತುಲಾ
8. ವೃಶ್ಚಿಕಃ
9. ಧನುಃ
10. ಮಕರಃ
11. ಕುಂಭಃ
12. ಮೀನಃ

sumashri.com

# ಯೋಗಪರಿಚಯ

ವಿಷ್ಕಂಭಃ ಪ್ರೀತಿರಾಯುಷ್ಮಾನ್ ಸೌಭಾಗ್ಯಃ ಶೋಭನಸ್ತಥಾ|

ಅತಿಗಂಡಃ ಸುಕರ್ಮಾ ಚ ಧೃತಿಃ ಶೂಲಸ್ತಥೈವ ಚ ||

ಗಂಡೋ ವೃದ್ಧಿರ್ಧ್ರುವಶ್ಚೈವ ವ್ಯಾಘಾತೋ ಹರ್ಷಣಸ್ತಥಾ|

ವಜ್ರಃ ಸಿದ್ಧಿಃ ವ್ಯತೀಪಾತಃ ವರೀಯಾನ್ ಪರಿಘಃ ಶಿವಃ||

ಸಿದ್ಧಃ ಸಾಧ್ಯಃ ಶುಭಃ ಶುಕ್ಲಃ ಬ್ರಹ್ಮ ಚೈಂದ್ರಶ್ಚ ವೈಧೃತಿಃ |

ಏತೇ ಯೋಗಾಸ್ತುವಿಜ್ಞೇಯಾಃ ಸಪ್ತವಿಂಶತಿಸಂಖ್ಯಕಾಃ ||

1. ವಿಷ್ಕಂಭಃ
2. ಪ್ರೀತಿಃ
3. ಆಯುಷ್ಮಾನ್
4. ಸೌಭಾಗ್ಯಃ
5. ಶೋಭನಃ
6. ಅತಿಗಂಡಃ
7. ಸುಕರ್ಮಾ
8. ಧೃತಿಃ
9. ಶೂಲಃ
10. ಗಂಡಃ
11. ವೃದ್ಧಿಃ
12. ಧ್ರುವಃ

13. ವ್ಯಾಘಾತೋ
14. ಹರ್ಷಣಃ
15. ವಜ್ರಃ
16. ಸಿದ್ಧಿಃ
17. ವ್ಯತೀಪಾತಃ
18. ವರೀಯಾನ್
19. ಪರಿಘಃ
20. ಶಿವಃ
21. ಸಿದ್ಧಃ
22. ಸಾಧ್ಯಃ
23. ಶುಭಃ
24. ಶುಕ್ಲಃ
25. ಬ್ರಹ್ಮ
26. ಐಂದ್ರಃ
27. ವೈಧೃತಿಃ

## <u>ಕರಣ ಪರಿಚಯಃ</u>

ಬವಶ್ಚ ಬಾಲವಃ  ಕೌಲಃ ತೈತಿಲೋ ಗರಜೋ ವಣಿಕ್|

ಭದ್ರಂ ಚ ಶಕುನಿಶ್ಚೈವ ಚತುಷ್ಪಾನ್ನಾಗವಾಂಸ್ತಥಾ|

ಕಿಂಸ್ತುಘ್ನಮಿತಿ ಚೈತಾನಿ ಪ್ರೋಕ್ತಾನಿ ಕರಣಾನಿ ವೈ||

1. ಬವಃ
2. ಬಾಲವಃ
3. ಕೌಲವಃ
4. ತೈತಿಲಃ
5. ಗರಜಃ
6. ವಣಿಕ್
7. ಭದ್ರಮ್
8. ಶಕುನಿಃ
9. ಚತುಷ್ಪಾತ್
10. ನಾಗವಾನ್
11. ಕಿಂಸ್ತುಘ್ನಮ್

sumashri.com

# ವಾರ ಪರಿಚಯ

ಭಾನುಶ್ಚ ಸೋಮವಾರಶ್ಚ ಮಂಗಲೋ ಬುಧಸಂಜ್ಞಕಃ|

ಬೃಹಸ್ಪತಿಃ ಶುಕ್ರಶನೀ ಸಪ್ತವಾರಾಃ ಪ್ರಕೀರ್ತಿತಾಃ||

1. ಭಾನುವಾರಃ
2. ಸೋಮವಾರಃ
3. ಮಂಗಲವಾರಃ
4. ಬುಧವಾರಃ
5. ಗುರುವಾರಃ
6. ಶುಕ್ರವಾರಃ
7. ಶನಿವಾರಃ

# ಶಿಷ್ಟಾಚಾರ

| | | |
|---|---|---|
| ಹರಿಃ ಓಮ್ | ಶುಭಸಾಯಮ್ | ಧನ್ಯವಾದಃ |
| ಸುಪ್ರಭಾತಮ್ | ನಮಸ್ಕಾರಃ / ನಮಸ್ತೇ | ಸ್ವಾಗತಮ್ |
| ಶುಭಮಧ್ಯಾಹ್ನಮ್ | ಶುಭರಾತ್ರಿಃ | |

sumashri.com

# ನೀತಿಕಥೆ

## ಕ್ರೂರಿಗಳು ಯಾರು?

ಚಂದ್ರಗಿರಿ ನಗರದ ಸಮೀಪ ಒಂದು ದೊಡ್ಡ ಕಾಡಿತ್ತು ಆ ಕಾಡಿನಲ್ಲಿ ಅಗ್ನಿಮಿತ್ರ ಎಂಬ ಋಷಿಗಳು ತಮ್ಮ ಸಾವಿರಾರು ಶಿಷ್ಯರೊಂದಿಗೆ ವಾಸಿಸುತ್ತಿದ್ದರು. ಅವರ ಆಶ್ರಮ ಪ್ರಶಾಂತವಾದ ವಾತಾವರಣದಲ್ಲಿತ್ತು. ಆಶ್ರಮದ ಮುಂದೆ ವಿಶಾಲವಾದ ನದಿಯೊಂದು ಹರಿಯುತ್ತಿತ್ತು. ಜಿಂಕೆ, ಮೊಲ, ಹಂಸ, ಪಾರಿವಾಳ ಮೊದಲಾದ ಪ್ರಾಣಿ ಪಕ್ಷಿಗಳು ಆಶ್ರಮದ ಬಳಿ ಎಲ್ಲೆಂದರಲ್ಲಿ ಇರುತ್ತಿದ್ದವು. ಪ್ರಾತಃಕಾಲದಲ್ಲಿ ಆಶ್ರಮದ ಮುಂದಿರುವ ದೊಡ್ಡದಾದ ಚಪ್ಪರದಲ್ಲಿ ಎಲ್ಲ ಶಿಷ್ಯರು ಸೇರುತ್ತಿದ್ದರು. ಗುರುಗಳಾದ ಅಗ್ನಿಮಿತ್ರರು ಅವರುಗಳಿಗೆ ವೇದ, ಉಪನಿಷತ್ತುಗಳನ್ನು ಹೇಳಿಕೊಡುತ್ತಿದ್ದರು. ಒಂದು ದಿನ ಗುರುಗಳು ಪಾಠ ಪ್ರವಚನವನ್ನು ಮಾಡುತ್ತಿದ್ದಾಗ ದೂರದಿಂದ ಸಿಂಹದ ಘರ್ಜನೆ ಕೇಳಿಸಿತು. ಅದುವರೆಗೆ ಪ್ರಶಾಂತವಾಗಿದ್ದ ಆ

ಕಾಡಿಗೆ ಕ್ರೂರಪ್ರಾಣಿಯೊಂದು ಪ್ರವೇಶಿಸಿತ್ತು. ಗುರುಗಳಿಗೆ ಏಕೋ ಮನಸ್ಸು ಕಸಿವಿಸಿಯಾಯಿತು. ಅಶಾಂತಿಯಿಂದ ಪಾಠವನ್ನು ನಿಲ್ಲಿಸಿ ಎದ್ದು ಹೋದರು. ಮುಂದೆ ಆ ಕಾಡಿನಲ್ಲಿ ಒಂದೊಂದೇ ಕ್ರೂರ ಪ್ರಾಣಿಗಳು ಕಾಣಿಸಿಕೊಳ್ಳತೊಡಗಿದವು. ನಿರ್ಭಯವಾಗಿ ಓಡಾಡಿಕೊಂಡಿದ್ದ ಸಾಧು ಪ್ರಾಣಿಗಳು ಆ ದುಷ್ಟ ಮೃಗಗಳಿಗೆ ಬಲಿಯಾಗತೊಡಗಿದವು. ಆಶ್ರಮ ವಾಸಿಗಳು "ಅಲ್ಲೊಂದು ಹುಲಿಯನ್ನು ಕಂಡೆ, ಇಲ್ಲೊಂದು ಚಿರತೆಯನ್ನು ಕಂಡೆ," ಎಂದು ಮಾತನಾಡಿಕೊಳ್ಳತೊಡಗಿದರು. ಕೆಲವೇ ದಿನಗಳಲ್ಲಿ ಒಬ್ಬೊಬ್ಬರಾಗಿ ಆಶ್ರಮವಾಸಿಗಳೂ ಕಾಣೆಯಾಗತೊಡಗಿದರು. ಒಟ್ಟಿನಲ್ಲಿ ಆ ಕಾಡಿನಲ್ಲಿ ಎಲ್ಲರೂ ಭಯದಿಂದ ಬದುಕುವಂತಾಯಿತು.

ಗುರುಗಳು ಆ ದುಷ್ಟ ಪ್ರಾಣಿಗಳ ನಿಗ್ರಹಕ್ಕಾಗಿ ಹೋಮ-ಹವನಗಳನ್ನು ಮಾಡಿಸಿದರು. ಅದರಿಂದ ಏನೂ ಪ್ರಯೋಜನವಾಗಲಿಲ್ಲ, ನೋಡ ನೋಡುತ್ತಿದ್ದಂತೆ ಆಶ್ರಮ ವಾಸಿಗಳೆಲ್ಲರೂ ದುಷ್ಟ ಮೃಗಗಳಿಗೆ ಆಹಾರವಾಗಿ ಹೋದರು. ಅಗ್ನಿಮಿತ್ರರು ಹೆಸರಿಗೆ ತಕ್ಕಂತೆ ಅಗ್ನಿಯಂತೆ ಪ್ರಜ್ವಲಿಸುತ್ತಿದ್ದುದರಿಂದ ಅವರ ಬಳಿಗೆ ಸುಳಿಯಲು ಯಾವ ಪ್ರಾಣಿಗೂ ಸಾಧ್ಯವಾಗಲಿಲ್ಲ. ಒಬ್ಬಂಟಿಗರಾದ ಅಗ್ನಿಮಿತ್ರರು ದುಃಖದಿಂದ ಪರಿತಪಿಸತೊಡಗಿದರು. ಅವರಿಗೆ ಕ್ರೂರ ಮೃಗಗಳ ಮೇಲೆ ಎಲ್ಲಿಲ್ಲದ ಸಿಟ್ಟು ಬಂತು. ಅವುಗಳ ಅಳಿವಿಗಾಗಿ ತಪಸ್ಸು ಮಾಡತೊಡಗಿದರು. ಹಲವಾರು ವರ್ಷಗಳ ಬಳಿಕ ದೇವರು ಅವರಿಗೆ ಪ್ರತ್ಯಕ್ಷವಾಗಿ, "ಅಗ್ನಿಮಿತ್ರ, ಏನು ನಿನ್ನ ಕೋರಿಕೆ?" ಎಂದು ಕೇಳಿದ. ಅಗ್ನಿಮಿತ್ರರು "ದೇವ, ನಾನು ನನ್ನ ಶಿಷ್ಯರೊಂದಿಗೆ ಈ ಕಾಡಿನಲ್ಲಿ ಶಾಂತಿ ನೆಮ್ಮದಿಯಿಂದ ಜೀವನ ಮಾಡಿಕೊಂಡಿದ್ದೆ. ಒಮ್ಮೆ ಎಲ್ಲಿಂದಲೋ ಕೆಲವು ಕ್ರೂರ ಮೃಗಗಳು ಈ ಕಾಡಿಗೆ ಬಂದು ಸೇರಿಕೊಂಡು ನಮಗೆ ತೊಂದರೆ ಕೊಡತೊಡಗಿದವು. ಮೊದ ಮೊದಲು ಸಾಧು ಪ್ರಾಣಿಗಳನ್ನು ತಿಂದುಕೊಂಡಿದ್ದ ಅವು, ಕ್ರಮೇಣ ನನ್ನ ಶಿಷ್ಯರನ್ನೇ ತಿನ್ನತೊಡಗಿದವು. ಈಗ ಈ ಕಾಡಿನಲ್ಲಿ ಉಳಿದಿರುವುದು ನಾನೊಬ್ಬನೆ. ಮುಂದೇನಾಗುವುದೋ ಗೊತ್ತಿಲ್ಲ. ಆದುದರಿಂದ ಕಾಡಿನಲ್ಲಿ ಮುಂದೆ ಒಂದೇ ಒಂದು ದುಷ್ಟಮೃಗವೂ ಇಲ್ಲದಂತೆ ಮಾಡು" ಎಂದು ಕೇಳಿಕೊಂಡನು. ಅವರ ಮಾತನ್ನು ಕೇಳಿದ ದೇವರು, "ಅಗ್ನಿಮಿತ್ರ, ಜಗತ್ತಿನಲ್ಲಿ ಎಲ್ಲ ಜೀವಿಗಳಿಗೂ ಬದುಕುವ ಹಕ್ಕಿದೆ. ನಿನ್ನೊಬ್ಬನ ಒಳಿತಿಗಾಗಿ ಆ ಎಲ್ಲ ಜೀವಿಗಳ ಬದುಕುವ ಹಕ್ಕನ್ನು ಕಿತ್ತುಕೊಳ್ಳುವುದು ಸರಿಯಲ್ಲ" ಎಂದ. ಅಗ್ನಿಮಿತ್ರರು, "ನಿನಗೆ ವರ ಕೊಡುವ ಇಷ್ಟವಿದ್ದರೆ ನಾನು ಕೇಳಿದ ವರವನ್ನು ಕೊಡು. ಇಲ್ಲದಿದ್ದರೆ ನಾನು ದೇಹತ್ಯಾಗ ಮಾಡಿ ಈ ಲೋಕದ ಸಂಬಂಧವನ್ನು ಕಡಿದುಕೊಳ್ಳುತ್ತೇನೆ" ನಿಷ್ಠೂರವಾಗಿ ಎಂದರು. ದೇವರು ಬೇರೆ ದಾರಿ ಕಾಣದೆ, "ತಥಾಸ್ತು ನಿನ್ನಿಚ್ಛೆಯಂತೆ ಈ ಕಾಡಿನಲ್ಲಿ ಇನ್ನು ಮುಂದೆ ಕೂರ ಪ್ರಾಣಿಗಳು ಇರುವುದಿಲ್ಲ" ಎಂದು ಹೇಳಿ ಮಾಯವಾದನು. ಅಗ್ನಿಮಿತ್ರರು ಸಂತೋಷದಲ್ಲಿ ಕಾಡಿನಲ್ಲೆಲ್ಲ ಓಡಾಡಿದರು. ಎಲ್ಲೂ ಒಂದೂ ದುಷ್ಟ ಮೃಗ ಕಾಣಲಿಲ್ಲ. ಕಾಡಿನಲ್ಲಿ ಸಿಕ್ಕಿದ ಹಣ್ಣು ಹಂಪಲುಗಳನ್ನು ತಿಂದು ಅವರು ನೆಮ್ಮದಿಯಿಂದ ಆಶ್ರಮದಲ್ಲಿ ಮಲಗಿ ನಿದ್ರೆ ಮಾಡಿದರು. ಕೆಲವೇ ದಿನಗಳಲ್ಲಿ ಕಾಡು ಹಿಂದಿನಂತೆ ಪ್ರಶಾಂತ ವನವಾಗಿ ಮಾರ್ಪಟ್ಟಿತು. ಮೊಲ, ಜಿಂಕೆ, ನವಿಲು, ಹಂಸಗಳು. ಯಾರ ಭಯವೂ ಇಲ್ಲದೆ ತಿರುಗಾಡ ತೊಡಗಿದವು. ವನವು ಹಸಿರಿನಿಂದ ಕಂಗೊಳಿಸಿ ಎಲ್ಲಿ ನೋಡಿದರೂ ಹಣ್ಣು ಹಂಪಲುಗಳು ಗೊಂಚಲು ಗೊಂಚಲುಗಳಾಗಿ. ತೂಗಾಡುತ್ತಿದ್ದವು. ಪಶು ಪಕ್ಷಿಗಳು ನೆಮ್ಮದಿಯಿಂದ ಬದುಕ ತೊಡಗಿದವು. ಒಟ್ಟಿನಲ್ಲಿ ಹೇಳುವುದಾದರೆ ಆ ಕಾಡು ನಂದನ ವನವಾಯಿತು. ಸಮೀಪದಲ್ಲಿದ್ದ ಹಳ್ಳಿಯವನೊಬ್ಬ ಒಮ್ಮೆ ಆ ಕಾಡಿಗೆ ದಾರಿತಪ್ಪಿ ಬಂದ.

sumashri.com

ಎಲ್ಲೂ ಒಂದು ಹುಲಿಯಾಗಲಿ, ಸಿಂಹವಾಗಲಿ, ಚಿರತೆಯಾಗಲಿ ಕಾಣಲಿಲ್ಲ ಧೈರ್ಯದಿಂದ ಕಾಡಿನಲ್ಲೆಲ್ಲ ಓಡಾಡಿದ. ಕಡೆಗೆ ಕೈಗೆ ಸಿಕ್ಕಿದಷ್ಟು ಹಣ್ಣುಗಳನ್ನು ಕಿತ್ತು ತಿಂದು, ಜೇನುತುಪ್ಪವನ್ನು ಕುಡಿದು ಊರಿಗೆ ಹಿಂತಿರುಗಿದ. ಈ ವಿಷಯ ಊರವರಿಗೆಲ್ಲ ತಿಳಿಯಿತು. ಅವರೂ ಗುಂಪು ಗುಂಪಾಗಿ ಕಾಡಿಗೆ ಬರತೊಡಗಿದರು. ಕೆಲವೇ ದಿನಗಳಲ್ಲಿ ಕಾಡಿನಲ್ಲಿರುವ ವನ ಆಹಾರಗಳೆಲ್ಲ ಬರಿದಾಯಿತು. ಜನರು ಈಗ ಕಾಡಿನಲ್ಲಿರುವ ಮರಗಳನ್ನು ಕಡಿದು ಮಾರ ತೊಡಗಿದರು. ಪ್ರಾಣಿಗಳನ್ನು ಕೊಂದು ತಿನ್ನ ತೊಡಗಿದರು. ಏನೋ ಮಾಡಲು ಹೋಗಿ ಏನೋ ಆಯಿತು ಎನ್ನುವಂತಾಯಿತು ಅಗ್ನಿಮಿತ್ರರ ಸ್ಥಿತಿ. ಕ್ರೂರ ಪ್ರಾಣಿಗಳ ಕಾಟ ತಪ್ಪಿತು ಅನ್ನುವಾಗ ಮನುಷ್ಯರು ಅವುಗಳಿಗಿಂತಲೂ ಕ್ರೂರವಾಗಿ ವರ್ತಿಸುವುದನ್ನು ಅವರು ಕಾಣಬೇಕಾಯಿತು. ಜನರನ್ನು ತಡೆದು ಬುದ್ಧಿ ಹೇಳಿದರು. ಯಾರೂ ಅವರ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ, ಕಾಡೆಲ್ಲ ನಾಡಾಗತೊಡಗಿತು. ಆ ವಾತಾವರಣದಲ್ಲಿ ಇರಲಾಗದೆ ಅಗ್ನಿಮಿತ್ರರು ಮತ್ತೊಂದು ಕಾಡಿಗೆ ಹೋಗಿ ತಪಸ್ಸು ಮಾಡತೊಡಗಿದರು. ಕೆಲವು ವರ್ಷಗಳ ಬಳಿಕ ದೇವರು ಅವರಿಗೆ ಮತ್ತೆ ಪ್ರತ್ಯಕ್ಷನಾದ. ಅಗ್ನಿಮಿತ್ರರು, “ದೇವ, ನಾನು ತಪ್ಪು ಮಾಡಿದೆ. ಕ್ರೂರ ಪ್ರಾಣಿಗಳು ಇಲ್ಲದಿದ್ದರೆ ಕಾಡನ್ನು ರಕ್ಷಿಸುವುದು ಬಹಳ ಕಷ್ಟ. ಕಾಡಿನಿಂದ ಗಾಳಿ, ಮಳೆ ಉಂಟಾಗುತ್ತದೆ ಎಂದು ಗೊತ್ತಿದ್ದರೂ ಸ್ವಾರ್ಥಿಗಳಾದ ಮನುಷ್ಯರು ಕಾಡಿನ ಸಂಪತ್ತನ್ನು ಲೂಟಿ ಮಾಡುತ್ತ ಕಾಡನ್ನು ನಾಶ ಮಾಡುತ್ತಿದ್ದಾರೆ. ಹೀಗೇ ಪರಿಸರ ನಾಶವಾಗುತ್ತಿದ್ದರೆ ಮುಂದೊಂದು ದಿನ ಮಾನವ ಕುಲವೇ ಇಲ್ಲವಾಗುತ್ತದೆ. ದಯವಿಟ್ಟು ಮತ್ತೆ ನಮ್ಮ ಕಾಡಿಗೆ ಕ್ರೂರಮೃಗಗಳನ್ನು ಕಳುಹಿಸು. ನನ್ನೊಬ್ಬನ ಕಲ್ಯಾಣಕ್ಕಾಗಿ ಜಗತ್ತಿನ ಕಲ್ಯಾಣವನ್ನು ಕಡೆಗಣಿಸುವುದು ಸರಿಯಲ್ಲ. ನನ್ನನ್ನು ನಿನ್ನ ಬಳಿಗೆ ಕರೆದುಕೊ, ಎಂದು ಬೇಡಿಕೊಂಡನು. ದೇವರು, “ತಥಾಸ್ತು” ಎಂದು ಅಗ್ನಿಮಿತ್ರರಿಗೆ ಮುಕ್ತಿಯನ್ನು ಕರುಣಿಸಿ, ಅವರಿದ್ದ ಕಾಡಿನಲ್ಲಿ ಮತ್ತೆ ಕ್ರೂರಮೃಗಗಳನ್ನು ಸೃಷ್ಟಿಸಿದನು. ಜನರು ಅವುಗಳನ್ನು ನೋಡಿ ಹೆದರಿ ಕಾಡಿನಿಂದ ಓಡಿ ಹೋದರು. ಕಾಡು ಕೆಲವೇ ವರ್ಷಗಳಲ್ಲಿ ಮತ್ತೆ ಮೊದಲಿನ ಸ್ಥಿತಿಗೆ ಬಂದಿತು.

ನೀತಿ: ಪ್ರಕೃತಿಯ ವಿರುದ್ಧವಾಗಿ ಯಾರೂ ಹೋಗುವಂತಿಲ್ಲ, ಹಾಗೆ ಹೋದರೆ ಅನಾಹುತ ಕಟ್ಟಿಟ್ಟ ಬುತ್ತಿ.

sumashri.com

## ಸುಭಾಷಿತ

**ವಿದ್ಯಾ ದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಮ್|**

**ಪಾತ್ರತ್ವಾತ್ ಧನಮಾಪ್ನೋತಿ ಧನಾತ್ ಧರ್ಮಂ ತತಃ ಸುಖಮ್||**

ಅರ್ಥ – ವಿದ್ಯೆಯು ವಿನಯವನ್ನು ನೀಡುತ್ತದೆ, ವಿನಯದಿಂದ ಯೋಗ್ಯತೆಯು ಲಭಿಸುತ್ತದೆ, ಯೋಗ್ಯತೆಯುಳ್ಳವನು ಸಂಪತ್ತನ್ನು ಪಡೆಯುತ್ತಾನೆ, ಸಂಪತ್ತನ್ನು ಹೊಂದಿದವನು ದಾನಧರ್ಮಾದಿಗಳನ್ನು ಮಾಡುತ್ತಾನೆ. ದಾನಧರ್ಮಾದಿಗಳನ್ನು ಮಾಡಿದವನು ಜೀವನದಲ್ಲಿ ಸುಖವನ್ನು ಪಡೆಯುತ್ತಾನೆ. ಆದ್ದರಿಂದ ಸರಿಯಾಗಿ ವಿದ್ಯಾರ್ಜನೆಯನ್ನು ಮಾಡಬೇಕು.

## ಉತ್ತರಗಳು

1. ಸಂವತ್ಸರಗಳು ಅರವತ್ತು.
2. ಭಾರತದೇಶದ ರಾಷ್ಟ್ರಪುಷ್ಪ ಕಮಲ.
3. ಲಕ್ಷ್ಮಣನ ಪತ್ನಿಯ ಹೆಸರು ಊರ್ಮಿಳಾ.
4. ಶಿವಮೊಗ್ಗ ಜಿಲ್ಲೆಯ ಮತ್ತೂರು ಹಳ್ಳಿಯನ್ನು ಸಂಸ್ಕೃತಗ್ರಾಮ ಎಂದು ಕರೆಯುತ್ತಾರೆ.
5. ಕಾಲಟಿ ಶ್ರೀಶಂಕರಾಚಾರ್ಯರ ಜನ್ಮಸ್ಥಾನ.
6. ಆದಿಕವಿ ವಾಲ್ಮೀಕಿ.
7. ಶಿವನ ವಾಹನ ನಂದಿ.
8. ನಾಟ್ಯಶಾಸ್ತ್ರದ ಕರ್ತೃ ಭರತಮುನಿ.
9. ಭೂಮಿ, ನೀರು, ಅಗ್ನಿ, ಗಾಳಿ ಮತ್ತು ಆಕಾಶಗಳು ಪಂಚಭೂತಗಳು.
10. ಕಾಶೀಕ್ಷೇತ್ರದಲ್ಲಿರುವ ದೇವಿಯ ಹೆಸರು ವಿಶಾಲಾಕ್ಷಿ.

sumashri.com

## ರಸಪ್ರಶ್ನೆಗಳು

1. ಧೃತರಾಷ್ಟ್ರನ ಏಕಮಾತ್ರ ಪುತ್ರಿಯ ಹೆಸರೇನು?
2. ನಲಂದಾ ಏತಕ್ಕಾಗಿ ಪ್ರಖ್ಯಾತವಾಗಿದೆ?
3. ಮಹಾತ್ಮ ಬುದ್ಧ ಎಲ್ಲಿ ಜನಿಸಿದನು?
4. ಮಂಗಳೂರಿನ ಸಂಸ್ಕೃತ ಹೆಸರೇನು?
5. ಭಾರತದ ಅತ್ಯುನ್ನತ ಪರ್ವತಶಿಖರ ಯಾವುದು?
6. ಋಗ್ವೇದದಲ್ಲಿ ಎಷ್ಟು ಅಷ್ಟಕಗಳಿವೆ?
7. ಶಿವನಿಂದ ವರ ಪಡೆದ ಮೂರುಮಂದಿ ರಕ್ಕಸರು ಯಾರು?
8. ಬ್ರಹ್ಮನ ವಾಹನ ಯಾವುದು?
9. ಪಂಚಗವ್ಯಗಳು ಯಾವುವು?
10. ಸೊನ್ನೆಯ ಮೂಲ ಹೆಸರೇನು?

# ಶಾಂತಿಮಂತ್ರ

**ಸರ್ವೇ ಭವಂತು ಸುಖಿನಃ ಸರ್ವೇ ಸಂತು ನಿರಾಮಯಾಃ|**

**ಸರ್ವೇ ಭದ್ರಾಣಿ ಪಶ್ಯಂತು ಮಾ ಕಶ್ಚಿತ್ ದುಃಖಭಾಗ್ ಭವೇತ್||**

ಅರ್ಥ – ಲೋಕದಲ್ಲಿ ಎಲ್ಲರೂ ಸುಖವಾಗಿರಲಿ, ಎಲ್ಲರೂ ರೋಗಗಳಿಂದ ಮುಕ್ತರಾಗಿ ಆರೋಗ್ಯವಂತರಾಗಿರಲಿ, ಎಲ್ಲರೂ ಒಳ್ಳೆಯದನ್ನೇ ಮಾಡಲಿ ಮತ್ತು ಯಾರೂ ಕೂಡಾ ದುಃಖವನ್ನು ಅನುಭವಿಸದಿರಲಿ.

| ಓಂ ತತ್ ಸತ್ |

**************

ಹೆಚ್ಚಿನ ವಿವರಗಳಿಗಾಗಿ sumashri.com ಗೆ ಭೇಟಿ ನೀಡಿ.

sumashri.com

